ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಧಾರವಾಡ-580001
**Deputy Commissioner Office,
Dharwad-580001**
*e-mail:* deo.dharwad@gmail.com

ಕರ್ನಾಟಕ ಸರ್ಕಾರ
Government of karnataka

ದೂರವಾಣಿ: 0836-2233840, 2233880,
(ಫ್ಯಾಕ್ಸ್) 0836-2747102,
website:www.dharwad.nic.in

ಕ್ರ.ಸಂ.ಸಿಬ್ಬಂದಿ-3/ಗ್ರಾಲೆನೇ/ವಹಿ-10/2019-20

ದಿನಾಂಕ 30-11-2019

## ಪ್ರ ಕ ಟ ಣೆ

ವಿಷಯ:- ಧಾರವಾಡ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿಯಿಂದ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಲು ತಾತ್ಕಾಲಿಕ ಪಟ್ಟಿ ಪ್ರಕಟಿಸುವ ಕುರಿತು

ಉಲ್ಲೇಖ:- ಈ ಕಾರ್ಯಾಲಯದ ಸಮಸಂಖ್ಯೆ ಅಧಿಸೂಚನೆ ದಿ: 31-07-2019

ಧಾರವಾಡ ಜಿಲ್ಲಾ ಕಂದಾಯ ಘಟಕದಲ್ಲಿ ವಿವಿಧ ಕಾರಣಗಳಿಂದ ಖಾಲಿ ಇರುವ 22 ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿಯಿಂದ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಲು ದಿನಾಂಕ 31-07-2019 ರಂದು ಅಧಿಸೂಚನೆ ಹೊರಡಿಸಿ ವೆಬ್‌ಸೈಟ್ http://dharwad-va.kar.nic.in ರಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಒಟ್ಟು ಸ್ವೀಕೃತವಾದ ಅರ್ಹ ಅರ್ಜಿಗಳಲ್ಲಿ 1:10 ಅನುಪಾತದಲ್ಲಿ ನೇರ ಮೀಸಲಾತಿ ಮತ್ತು ಸಮತಳ ಮೀಸಲಾತಿ ಆಧಾರದ ಮೇಲೆ ತಾತ್ಕಾಲಿಕ ಪಟ್ಟಿಯನ್ನು ತಯಾರಿಸಿ http://dharwad.nic.in ರಲ್ಲಿ ಪ್ರಕಟಿಸಲಾಗಿದೆ. ಸದರಿ ತಾತ್ಕಾಲಿಕ ಪಟ್ಟಿಗೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 15 ಅಧಿಕೃತ ಕಾರ್ಯನಿರ್ವಹಣಾ (Official working days) ದಿವಸದೊಳಗಾಗಿ ಅಂದರೆ ದಿನಾಂಕ 18-12-2019 ರೊಳಗಾಗಿ ಜಿಲ್ಲಾಧಿಕಾರಿಗಳು, ಧಾರವಾಡ ಇವರ ಕಾರ್ಯಾಲಯಕ್ಕೆ ಅಥವಾ ಇ-ಮೇಲ್ va2019.dharwad@gmail.com ನೇದ್ದರ ಮೂಲಕ ಸಂಬಂಧಿಸಿದ ದಾಖಲೆಗಳೊಂದಿಗೆ ಆಕ್ಷೇಪಣೆ ಸಲ್ಲಿಸಿದಲ್ಲಿ ಪರಿಶೀಲಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು. ಅವಧಿಯ ನಂತರದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಅಧ್ಯಕ್ಷರು,
ಗ್ರಾಮಲೆಕ್ಕಾಧಿಕಾರಿಗಳ ನೇರ ನೇಮಕಾತಿ
ಆಯ್ಕೆ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ

ಪ್ರತಿಗಳು:

1. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಧಾರವಾಡ ಇವರಿಗೆ-
   2/-ಸದರಿ ಪ್ರಕಟಣೆಯನ್ನು ಸಾರ್ವಜನಿಕ ಸುದ್ದಿ ಅಂತಾ ಸ್ಥಳೀಯ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲು ಕೋರಲಾಗಿದೆ.
2. ಜಿಲ್ಲೆಯ ಎಲ್ಲಾ ತಹಶೀಲ್ದಾರಗಳಿಗೆ
   2/- ಸದರ ಪ್ರಕಟಣೆಯನ್ನು ತಮ್ಮ ಕಾರ್ಯಾಲಯದ ನೋಟೀಸ ಬೋರ್ಡಿಗೆ ಪ್ರಕಟಿಸಿ, ಪ್ರಕಟಿಸಿದ ಬಗ್ಗೆ ವರದಿಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸುವುದು.